ಪಾತ್ರಗಳು ಮತ್ತೆ ಮತ್ತೆ ಎದುರಾಗಿ ತಮ್ಮ ಮನೋಗತವನ್ನೋ, ಬದುಕಲ್ಲಿ ನಡೆದ ವಿದ್ಯಮಾನಗಳನ್ನೋ ನಿರೂಪಿಸುತ್ತ ಹೋಗುತ್ತವೆ. ವಿವರಗಳು ಸಶಕ್ತವೂ, ಸಂಪನ್ನವೂ ಆಗಿವೆ, ಓಮನ್ ದೇಶದ ಸ್ಥೂಲ ರಾಜಕೀಯ, ಸಾಮಾಜಿಕ ಚಿತ್ರದ ಜೊತೆಗೇ ಗಾಢವಾದ ಕೌಟುಂಬಿಕ ಬದುಕಿನ ವಿವರಗಳಿಂದ ನಿರೂಪಣೆ ಸಮೃದ್ಧವಾಗಿದೆ.

ಅಬ್ದಲ್ಲಾ ಬಹುಶಃ ಈ ಕಾದಂಬರಿಯ ಏಕಸೂತ್ರದ ಕೇಂದ್ರ ಅನಿಸುತ್ತದೆ. ಏಕೆಂದರೆ, ಅವನಿಗೆ ಈ ಕಾದಂಬರಿಯ ಯಾವತ್ತೂ ಪಾತ್ರಗಳು ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧಿಸಿವೆ. ಅವನ ಸಂಬಂಧದ ನೆಲೆಯೇ ಅಭದ್ರವಾಗಿದ್ದರೂ ಅದು ಅವನಿಗೆ ಗೊತ್ತಿಲ್ಲದ ಸತ್ಯವಾಗಿಯೇ ಉಳಿದು ಬಿಡುತ್ತದೆ. ಹಾಗಿದ್ದೂ, ಅಂತರಂಗದ ಶೋಧದಲ್ಲಿ, ಕನಸು, ಭ್ರಮೆ ಮತ್ತು ಗೊಂದಲದಲ್ಲಿ ಅವನು ತನ್ನನ್ನು ತಾನು ತೆರೆದುಕೊಳ್ಳುತ್ತ, ಶೋಧಿಸುತ್ತ, ಖಾಲಿ ಮಾಡಿಕೊಳ್ಳುತ್ತ ಸಾಗುತ್ತಾನೆ. ಒಂದು ಹಂತದಲ್ಲಿ ಅಬ್ದಲ್ಲಾನ ಮಗನ ಆಟಿಸಂ ಕೂಡ ಜೋಕಾ ಕೈಯಲ್ಲಿ ರೂಪಕದಂತೆ ಬಳಸಲ್ಪಡುವುದು ಅಚ್ಚರಿ ಹುಟ್ಟಿಸುತ್ತದೆ. ಇಡೀ ಕಾದಂಬರಿಯ ಉದ್ದಕ್ಕೂ ಆಕಾಶಕಾಯಗಳು, ಮುಖ್ಯವಾಗಿ ಚಂದ್ರ ಒಂದು ಪಾತ್ರವಾಗಿ ನಮ್ಮೊಂದಿಗೆ ಬರುತ್ತಾನೆ. ಇವರೆಲ್ಲರೊಂದಿಗೆ ಸಾಗುತ್ತ ನಾವೂ ಪಡೆದುಕೊಳ್ಳುತ್ತ ಹೋಗುತ್ತೇವೆ. ಇದರಾಚೆಗೆ ಈ ಕಾದಂಬರಿಗೆ ಚೌಕಟ್ಟೆಂಬ ಚೌಕಟ್ಟಾಗಲಿ, ತುದಿಯೆಂಬೋ ತುದಿಯಾಗಲಿ ಇಲ್ಲ. ಹಾಗಾಗಿಯೇ, ಅತ್ಯಂತ ಅರ್ಹವಾಗಿಯೇ ಈ ಕಾದಂಬರಿ ಮ್ಯಾನ್ ಬೂಕರ್ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ, ಕೇವಲ ಓಮನ್ ದೇಶದ ಅರೇಬಿಕ್ ಕಾದಂಬರಿ ಎಂದೋ, ಹೆಣ್ಣುಮಗಳು ಬರೆದ ಮೂವರು ಹೆಮ್ಮಕ್ಕಳ ಕತೆಯೆಂದೋ, ಗುಲಾಮರ ಕತೆ ಎಂದೋ ಅಲ್ಲ. ಮುಖ್ಯವಾದ ಮಾತೆಂದರೆ, ಇದನ್ನು ಅರೇಬಿಕ್ ಭಾಷೆಯಲ್ಲಿ ಬರೆಯಲು ತೊಡಗಿದಾಗ ಜೋಕಾ ಅಲಹರ್ತಿಗಾದರೂ ತಾನಿದನ್ನು ಬುಕರ್ ಪ್ರಶಸ್ತಿಗಾಗಿ ಬರೆಯುತ್ತಿದ್ದೇನೆಂಬ ಅರಿವಿರಲಿಲ್ಲ. ನಾವೂ ಅದರ ಅರಿವಿನ ಭಾರದಿಂದ ಕಳಚಿಕೊಂಡು ಇದನ್ನು ಓದುವುದು ಮುಖ್ಯ.

> **ಕಾದಂಬರಿಯಲ್ಲಿ ಘಟನೆಗಳನ್ನು ಹಿಂದುಮುಂದಾಗಿ ಜೋಡಿಸಿದಂತೆ ಸಾಗುವ ನಿರೂಪಣೆ, ಪಾತ್ರಗಳು ಮತ್ತೆ ಮತ್ತೆ ಎದುರಾಗಿ ತಮ್ಮ ಮನೋಗತವನ್ನು ನಿರೂಪಿಸುತ್ತ ಹೋಗುವ ಪರಿ ಕಥಾನಕದ ಕುತೂಹಲವನ್ನು ಹೆಚ್ಚಿಸುತ್ತವೆ.**


## ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ನರೇಂದ್ರ ಪೈ ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ಮುಖ್ಯವಾಗಿ ವಿಮರ್ಶಕರು, ಕತೆಗಾರರು. ಅವರ ಕಥಾಸಂಕಲನಗಳು 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ'. ಕತೆಗಾರ ಎಸ್. ದಿವಾಕರ ಅವರ ಸಾಹಿತ್ಯ ಪರಿಚಯಿಸುವ ವಾಚಿಕೆ 'ರೂಪರೂಪಗಳನ್ನು ದಾಟಿ' ಸಂಪಾದಿಸಿದ್ದಾರೆ.